# ಕನ್ನಡ ವ್ಯಾಕರಣ

(ಕನ್ನಡ ಕಲಿಯುವರಿಗಾಗಿ)

ಪ್ರೊ॥ ಎಂ. ಬಸಣ್ಣ

***

## ಮೊದಲ ಮಾತು

ಕನ್ನಡವು ಒಂದು ಸುಂದರ ಭಾಷೆ. ಮಾತು ಮಾತ್ರವೇ ಅಲ್ಲ ಬರಹ ಕೂಡ ಮುದ್ದಾಗಿದೆ. ಕಣ್ಣು ಕಿವಿಗಳೆರಡಕ್ಕೂ ಸಂತಸ ನೀಡುತ್ತದೆ. ಕನ್ನಡ ಕಲಿಕೆಯೂ ಕೂಡ ಸರಳ ಹಾಗೂ ಸುಲಭ.

ಒಂದು ಭಾಷೆಯನ್ನು ಕಲಿಯಲು ಹಾಗೂ ಬರೆಯಲು ಅನುಸರಿಸಬೇಕಾದ ನಿಯಮಗಳನ್ನು ಕಲಿಸುವ ಶಾಸ್ತ್ರಕ್ಕೆ ವ್ಯಾಕರಣ ಎನ್ನುತ್ತೇವೆ. ಪ್ರತಿಯೊಂದು ಭಾಷೆಗೂ ತನ್ನದೇ ಆದ ವ್ಯಾಕರಣವಿರುತ್ತದೆ. ಇದು ಭಾಷೆಯಿಂದ ಭಾಷೆಗೆ ಭಿನ್ನವಾಗಿರುತ್ತದೆ. ಶುದ್ಧವಾಗಿ ಮಾತನಾಡಲು ಹಾಗೂ ಬರೆಯಲು ವ್ಯಾಕರಣದ ಜ್ಞಾನವಿರಬೇಕು. ಆದುದರಿಂದ ಒಂದು ಭಾಷೆಯನ್ನು ಕಲಿಯಬೇಕಾದರೆ ಆ ಭಾಷೆಯ ವ್ಯಾಕರಣವನ್ನು ಕಲಿಯಲೇಬೇಕು. ಈ ಲೇಖನದಲ್ಲಿ ಕನ್ನಡ ಕಲಿಯಬಯಸುವ ಅನ್ಯಭಾಷಿಕರಿಗೆ ಅವಶ್ಯಕ ವಾದಷ್ಟು ಸರಳವಾಗಿ ತಿಳಿಸಲು ಪ್ರಯತ್ನಿಸಲಾಗಿದೆ. ಇದನ್ನು ಇಂಗ್ಲಿಷ್ ಗ್ರಾಮರ್ ರೀತಿಯಲ್ಲಿ ರೂಪಿಸಲಾಗಿದೆ. ಹೇಳಿರುವ ವಿಧಾನ ಸಂಪೂರ್ಣ ನನ್ನದು.

ಕನ್ನಡದಲ್ಲಿ 50 ಅಕ್ಷರಗಳಿವೆ. ಇವುಗಳಲ್ಲಿ 16 ಸ್ವರಗಳೂ 34 ವ್ಯಂಜನಗಳೂ ಇವೆ. ಸ್ವರಗಳಿಗೆ ಸ್ವತಂತ್ರ ಉಚ್ಚಾರವಿದೆ. ಆದರೆ, ವ್ಯಂಜನಗಳಿಗೆ ಸ್ವತಂತ್ರ ಉಚ್ಚಾರವಿಲ್ಲ. ಸ್ವರಗಳ ಸಹಾಯದಿಂದ ಇವುಗಳನ್ನು ಉಚ್ಚರಿಸಬಹುದು. ವ್ಯಂಜನಗಳಿಗೆ ಸ್ವರ ಸೇರಿದಾಗ ಗುಣಿತಾಕ್ಷರ (ಕಾ-ಗುಣಿತ) ಗಳೂ, ವ್ಯಂಜನಗಳಿಗೆ ವ್ಯಂಜನಗಳು ಸೇರಿದಾಗ ಸಂಯುಕ್ತಾಕ್ಷರ (ಒತ್ತಕ್ಷರ)

ಗಳೂ ಉಂಟಾಗುತ್ತವೆ. (ನೋಡಿ: ನನ್ನ ತ್ರಿಭಾಷಾ ಬೋಧಿನಿ – ಮೇಲೆ ಕೊಟ್ಟಿದೆ).

## ವಾಕ್ಯ (Sentence)

ಅರ್ಥಪೂರ್ಣ ಅಕ್ಷರಗಳ ಜೋಡಣೆಗೆ ಪದ (Word) ಎನ್ನುತ್ತೇವೆ.

ಅರಸ, ಆನೆ, ಮರ, ಹುಡುಗ, ನಾಯಿ, ಬೆಕ್ಕು.

ಪರಿಪೂರ್ಣ ಅರ್ಥವನ್ನು ಕೊಡಬಲ್ಲ ಪದಗಳ ಗುಂಪಿಗೆ ವಾಕ್ಯ ಎನ್ನುತ್ತೇವೆ.

ನಾಯಿ ಬೊಗಳುತ್ತಿದೆ.

ಕುದುರೆ ಓಡುತ್ತಿದೆ.

ಬೆಕ್ಕು ಇಲಿಯನ್ನು ಕೊಲ್ಲುತ್ತದೆ.

ಕೋಳಿ ಕಾಳನ್ನು ತಿನ್ನುತ್ತದೆ. ಇತ್ಯಾದಿ.

ಕರ್ತೃಪದ, ಕರ್ಮಪದ ಮತ್ತು ಕ್ರಿಯಾಪದ: ಕೆಳಗಿನ ವಾಕ್ಯವನ್ನು ಗಮನಿಸಿರಿ.

ನಾನು ಕನ್ನಡವನ್ನು ಕಲಿಯುತ್ತೇನೆ.

ಈ ವಾಕ್ಯದಲ್ಲಿ ಮೂರು ಪದಗಳಿವೆ. ಇಲ್ಲಿ ಕಲಿಯುತ್ತೇನೆ ಎಂಬ ಪದವು ಮಾಡುವ ಕೆಲಸವನ್ನು ತೋರಿಸುತ್ತದೆ. ಇದಕ್ಕೆ ಕ್ರಿಯಾಪದ (Verb) ಎನ್ನುತ್ತಾರೆ. ವಾಕ್ಯದಲ್ಲಿ ಕ್ರಿಯಾಪದವು ಬಹಳ ಮುಖ್ಯವಾದುದು. ನಾನು ಎಂಬ ಪದವು ಕೆಲಸ ಮಾಡುವವನನ್ನು ಸೂಚಿಸುತ್ತದೆ. ಇದಕ್ಕೆ ಕರ್ತೃಪದ (Subject) ಎನ್ನುತ್ತಾರೆ. ಕ್ರಿಯಾಪದದ ಮೇಲೆ ಯಾರು/ಯಾವುದು ಎಂಬ ಪ್ರಶ್ನೆ ಹಾಕಿದಾಗ ಬರುವ ಉತ್ತರವೇ ಕರ್ತೃಪದ. ಕೊನೆಯದಾಗಿ, ಕನ್ನಡವನ್ನು ಎಂಬ ಪದವು ಮಾಡುವ ಕೆಲಸವನ್ನು ಸೂಚಿಸುತ್ತದೆ. ಇದಕ್ಕೆ ಕರ್ಮಪದ (Object) ಎನ್ನುತ್ತಾರೆ. ಕ್ರಿಯಾಪದದ ಮೇಲೆ ಏನನ್ನು/ಯಾವುದನ್ನು ಎಂಬ ಪ್ರಶ್ನೆ ಹಾಕಿದಾಗ ಬರುವ ಉತ್ತರವೇ ಕರ್ಮಪದ. ಹೀಗೆ, ಕ್ರಿಯಾಪದದ ಮೇಲೆ ಪ್ರಶ್ನೆಯನ್ನು ಹಾಕಿ ನಾವು ಕರ್ತೃಪದ ಹಾಗೂ ಕರ್ಮಪದಗಳನ್ನು ಕಂಡುಹಿಡಿಯಬಹುದು. ಮೇಲಿನ ವಾಕ್ಯದಲ್ಲಿ ನಾನು –> ಕರ್ತೃಪದ, ಕನ್ನಡವನ್ನು –> ಕರ್ಮಪದ, ಮತ್ತು

ಕಲಿಯುತ್ತೇನೆ –> ಕ್ರಿಯಾಪದ. ಒಂದು ವಾಕ್ಯದಲ್ಲಿ ಕರ್ತೃಪದ, ಕರ್ಮಪದ ಮತ್ತು ಕ್ರಿಯಾಪದಗಳು ಇದೇ ಕ್ರಮದಲ್ಲಿ ಬರುತ್ತವೆ. ಕೆಲವೊಮ್ಮೆ ವಿಶೇಷ ಸಂದರ್ಭದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾಗಬಹುದು.

ಕರ್ಮಪದದಲ್ಲಿ ಎರಡು ವಿಧಗಳುಂಟು: ಪ್ರತ್ಯಕ್ಷ ಕ್ರಿಯಾಪದ ಮತ್ತು ಪರೋಕ್ಷ ಕ್ರಿಯಾಪದ.

ಕ್ರಿಯಾಪದದ ಮೇಲೆ ಏನನ್ನು ಎಂಬ ಪ್ರಶ್ನೆ ಹಾಕಿದಾಗ ಬರುವ ಉತ್ತರವೇ ಪ್ರತ್ಯಕ್ಷ ಕರ್ಮಪದ.

ಕ್ರಿಯಾಪದದ ಮೇಲೆ ಯಾರಿಗೆ ಎಂಬ ಪ್ರಶ್ನೆ ಹಾಕಿದಾಗ ಬರುವ ಉತ್ತರವೇ ಪರೋಕ್ಷ ಕರ್ಮಪದ.

ಅಪ್ಪನು ನನಗೆ ಹಣ್ಣನ್ನು ಕೊಟ್ಟನು

ಈ ವಾಕ್ಯದಲ್ಲಿ ಅಪ್ಪನು ಏನನ್ನು ಕೊಟ್ಟನು ಎಂಬ ಪ್ರಶ್ನೆಗೆ ಬರುವ ಉತ್ತರ ಹಣ್ಣನ್ನು.. ಅಪ್ಪನು ಯಾರಿಗೆ ಕೊಟ್ಟನು ಎಂಬ ಪ್ರಶ್ನೆಗೆ ಬರುವ ಉತ್ತರ ನನಗೆ.

ಆದ್ದರಿಂದ ಹಣ್ಣನ್ನು ಎಂಬ ಪದವು ಪ್ರತ್ಯಕ್ಷ ಕರ್ಮಪದ. ನನಗೆ ಎಂಬುದು ಪರೋಕ್ಷ ಕರ್ಮಪದ.

ಪೂರಕಗಳು (Complements): ಒಂದು ವಾಕ್ಯದಲ್ಲಿ ಪೂರ್ಣ ಅರ್ಥವನ್ನು ತಿಳಿಸಲು ಸೇರಿಸಬಹುದಾದ ಪದ ಅಥವಾ ಪದಗಳ ಗುಂಪಿಗೆ ಪೂರಕ ಎಂದು ಹೆಸರು.

ಅವನು ಹೋದನು.

ಗೋಪಿಯು ಓಡುತ್ತಾನೆ.

ಮೇಲಿನ ವಾಕ್ಯಗಳು ಪೂರ್ಣ ಅರ್ಥವನ್ನು ಕೊಡುವುದಿಲ್ಲ. ಎಲ್ಲಿಗೆ ಹೋದನು? ಎಲ್ಲಿ ಆಡುತ್ತಾನೆ? ಎನ್ನುವುದು ಗೊತ್ತಾಗುವುದಿಲ್ಲ. ಅದಕ್ಕೆ ಬದಲಾಗಿ,

ಅವನು ಮಾರುಕಟ್ಟೆಗೆ ಹೋದನು.

ಗೋಪಿಯು ಬಯಲಿನಲ್ಲಿ ಓಡುತ್ತಾನೆ.

ಈ ವಾಕ್ಯಗಳು ಪೂರ್ಣ ಅರ್ಥವನ್ನು ಕೊಡುತ್ತವೆ. ಇಲ್ಲಿ ಬಂದಿರುವ ಮಾರುಕಟ್ಟೆಗೆ ಮತ್ತು ಬಯಲಿನಲ್ಲಿ ಎಂಬ ಪದಗಳು ಪೂರಕಗಳು

## ವಾಕ್ಯ ಭೇದಗಳು

ಕನ್ನಡದಲ್ಲಿ 5 ವಿಧವಾದ ವಾಕ್ಯಗಳನ್ನು ಕಾಣಬಹುದು.

1. ಧನಾತ್ಮಕ (Positive): ಕೆಲಸವು ನಡೆಯುವುದನ್ನು ಸೂಚಿಸುತ್ತದೆ.

    ಗಣೇಶ ಬಂದನು.

    ಹಸು ಹುಲ್ಲನ್ನು ತಿನ್ನುತ್ತಿದೆ.

2. ನಿಷೇಧಾರ್ಥಕ (Negative): ಕೆಲಸವು ನಡೆಯದಿರುವುದನ್ನು ಸೂಚಿಸುತ್ತದೆ.

    ಅವನು ಪಾಠವನ್ನು ಓದುವುದಿಲ್ಲ.

    ಮನೆಗೆ ಹೋಗುವುದು ಬೇಡ.

3. ಪ್ರಶ್ನಾರ್ಥಕ (Interrogative): ಪ್ರಶ್ನೆ ಕೇಳುವುದನ್ನು ಸೂಚಿಸುತ್ತದೆ.

    ನಿನ್ನ ಹೆಸರೇನು?

    ಯಾವ ತರಗತಿಯಲ್ಲಿ ಓದುತ್ತಿದ್ದೀಯ?

4. ವಿಧ್ಯರ್ಥಕ (Imperative): ಆಜ್ಞೆ, ಹಾರೈಕೆ, ವಿನಂತಿ, ಒಪ್ಪಿಗೆ ಇತ್ಯಾದಿಗಳನ್ನು ಸೂಚಿಸುತ್ತದೆ.

    ಮಗೂ, ಇಲ್ಲಿ ಬಾ.

    ನಿನಗೆ ಶುಭವಾಗಲಿ.

5. ಭಾವಸೂಚಕ (Exclamatory): ಆಶ್ಚರ್ಯ, ಮೆಚ್ಚುಗೆ, ಆಕ್ಷೇಪ ಮುಂತಾದ ಭಾವನೆಗಳನ್ನು ಸೂಚಿಸುತ್ತದೆ.

    ಭಲೇ! ಊರು ತುಂಬಾ ಸೊಗಸಾಗಿದೆ.

    ಥೂ! ಊಟ ಚನ್ನಾಗಿಲ್ಲ.

## ಪದ ಪರಿಚಯ (Parts of Speech)

ಕನ್ನಡದಲ್ಲಿ ಪದಗಳನ್ನು 8 ಭಾಗವಾಗಿ ವಿಂಗಡಿಸಬಹುದು.

1. ನಾಮಪದ (Noun)
2. ಸರ್ವನಾಮ (Pronoun)
3. ಕ್ರಿಯಾಪದ (Verb)
4. ನಾಮವಿಶೇಷಣ (Adjective)

5. ಕ್ರಿಯಾವಿಶೇಷಣ (Adverb)
6. ಸಂಬಂಧ ಸೂಚಕ (Preposition)
7. ಸಮುಚ್ಚಯ ಸೂಚಕ (Conjunction)
8. ಅವಧಾರಣ ಸೂಚಕ (Interjection)

ನಾಮಪದ (Noun)

ಒಂದು ವ್ಯಕ್ತಿ, ಸ್ಥಳ, ಪ್ರಾಣಿ ಅಥವಾ ವಸ್ತುವಿನ ಹೆಸರುಗಳನ್ನು ಸೂಚಿಸುವ ಪದಗಳಿಗೆ ನಾಮಪದ ಎನ್ನುತ್ತಾರೆ. ಗಣೇಶ, ತಿಪಟೂರು, ನಾಯಿ, ಮರ, ಇತ್ಯಾದಿ.

ನಾಮಪದದಲ್ಲಿ 4 ವಿಧಗಳಿವೆ.

1. ರೂಢನಾಮ (Common Noun): ರೂಢಿಯಿಂದ ಕರೆಯುವ ಹೆಸರುಗಳು.
ಹುಡುಗ, ಪಟ್ಟಣ, ನರಿ, ಕಲ್ಲು, ಇತ್ಯಾದಿ.

2. ಅಂಕಿತನಾಮ (Proper Noun): ನಿರ್ಧಿಷ್ಟ ಹೆಸರಿನಿಂದ ಕರೆಯುವ ಹೆಸರುಗಳು.
ರಂಗ, ಜಾನಕಿ, ಮಂಗಳೂರು, ಗಂಗಾನದಿ, ಇತ್ಯಾದಿ.

3. ಅನ್ವರ್ಥನಾಮ (Attributive Noun): ಅರ್ಥಕ್ಕೆ ಅನುಗುಣವಾಗಿ ಬಳಸುವ ಹೆಸರುಗಳು. ಕುರುಡ, ಹೆಳವ, ಬಡಗಿ, ಕಮ್ಮಾರ, ಇತ್ಯಾದಿ.

4. ಭಾವನಾಮ(Abstract Noun): ವಸ್ತುಗಳ ಸ್ವಭಾವವನ್ನು ತಿಳಿಸುವ ಪದಗಳು.
ನೋಟ, ಸುಳ್ಳು, ನಿಜ, ಇತ್ಯಾದಿ.

ನಾಮಪದದ ಮೂಲರೂಪಕ್ಕೆ ನಾಮಪ್ರಕೃತಿ ಅಥವಾ ಪ್ರಕೃತಿ (Root Noun) ಎಂದು ಹೆಸರು. ಈ ಪ್ರಕೃತಿಗೆ ವಿಭಕ್ತಿ ಪ್ರತ್ಯಯ ಅಥವಾ ಪ್ರತ್ಯಯ (Case ending) ಸೇರಿದಾಗ ನಾಮಪದ ವಾಗುತ್ತದೆ.

ಪ್ರಕೃತಿ + ಪ್ರತ್ಯಯ = ನಾಮಪದ.

ವಿಭಕ್ತಿ ಪ್ರತ್ಯಯ (Case): ಕನ್ನಡದಲ್ಲಿ 8 ವಿಭಕ್ತಿ ಪ್ರತ್ಯಯಗಳಿವೆ. ಈ ವಿಭಕ್ತಿ ಪ್ರತ್ಯಯಗಳನ್ನು ಹಾಗೂ ಅವು ಕೆಲವು ನಾಮಪ್ರಕೃತಿಗಳಿಗೆ ಸೇರುವುದನ್ನು ಕೆಳಗಿನ ಪಟ್ಟಿಯಲ್ಲಿ ತೋರಿಸಿದೆ.

| ವಿಭಕ್ತಿ | ಪ್ರತ್ಯಯ | ಗಣೇಶ | ಗೌರಿ | ಮರ |
|---|---|---|---|---|
| ಪ್ರಥಮಾ ವಿಭಕ್ತಿ | ಉ | ಗಣೇಶನು | ಗೌರಿಯು | ಮರವು |
| ದ್ವಿತೀಯ ವಿಭಕ್ತಿ | ಅನ್ನು | ಗಣೇಶನನ್ನು | ಗೌರಿಯನ್ನು | ಮರವನ್ನು |
| ತೃತೀಯ ವಿಭಕ್ತಿ | ಇಂದ | ಗಣೇಶನಿಂದ | ಗೌರಿಯಿಂದ | ಮರದಿಂದ |
| ಚತುರ್ಥಿ ವಿಭಕ್ತಿ | ಇಗೆ, ಗೆ, ಕ್ಕೆ | ಗಣೇಶನಿಗೆ | ಗೌರಿಗೆ | ಮರಕ್ಕೆ |
| ಷಷ್ಠಿ ವಿಭಕ್ತಿ | ಅ | ಗಣೇಶನ | ಗೌರಿಯ | ಮರದ |
| ಸಪ್ತಮಿ ವಿಭಕ್ತಿ | ಅಲ್ಲಿ | ಗಣೇಶನಲ್ಲಿ | ಗೌರಿಯಲ್ಲಿ | ಮರದಲ್ಲಿ |
| ಸಂಬೋಧನ ವಿಭಕ್ತಿ | ಏ, ಓ | ಗಣೇಶನೇ | ಗೌರಿಯೇ | ಮರವೇ |

ಸೂಚನೆ: ಪ್ರಕೃತಿ ಮತ್ತು ಪ್ರತ್ಯಯಗಳು ಸೇರಿದಾಗ ನಾಮಪದದಲ್ಲಿ ಉಂಟಾಗುವ ಬದಲಾವಣೆಗಳನ್ನು ಗಮನಿಸಿ. ಸಾಮಾನ್ಯವಾಗಿ ನ/ಯ/ವ ಅಕ್ಷರಗಳು ಹೊಸದಾಗಿ ಸೇರುತ್ತವೆ.

ಲಿಂಗ (Gender)

ವ್ಯಕ್ತಿ ಅಥವಾ ವಸ್ತುವನ್ನು ಗುರುತಿಸಲು ನಾವು ಲಿಂಗದ ಕಲ್ಪನೆಯನ್ನು ಉಪಯೋಗಿಸುತ್ತೇವೆ. ಕನ್ನಡದಲ್ಲಿ ಮೂರು ಲಿಂಗಗಳಿವೆ. ಅವು ಕ್ರಮವಾಗಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗ.

1. ಪುಲ್ಲಿಂಗ (Masculine Gender): ಗಂಡಸು ಅಥವಾ ಗಂಡು ಪ್ರಾಣಿಗಳನ್ನು ಸೂಚಿಸುವ ಶಬ್ದಗಳು. ಅಪ್ಪ, ಅಣ್ಣ, ಟಗರು, ಹುಂಜ, ಇತ್ಯಾದಿ.

2. ಸ್ತ್ರೀಲಿಂಗ (Feminine Gender): ಹೆಂಗಸು ಅಥವಾ ಹೆಣ್ಣು ಪ್ರಾಣಿಗಳನ್ನು ಸೂಚಿಸುವ ಶಬ್ದಗಳು. ಅಮ್ಮ, ಅಕ್ಕ, ಕುರಿ, ಹೇಂಟೆ, ಇತ್ಯಾದಿ.

3. ನಪುಂಸಕಲಿಂಗ (Neuter Gendeer): ಗಂಡು ಅಥವಾ ಹೆಣ್ಣು ಎಂದು ಗುರುತಿಸಲಾಗದ ಶಬ್ದಗಳು.

ಮರ, ಕಲ್ಲು, ಕರು, ಮಗು, ಇತ್ಯಾದಿ.

ಕೆಲವು ಪುಲ್ಲಿಂಗ ಪದಗಳಿಗೆ ತನ್ನದೇ ಆದ ಸ್ತ್ರೀಲಿಂಗ ಪದಗಳಿವೆ. ಉಳಿದ ಪುಲ್ಲಿಂಗ ಪದಗಳಿಗೆ ಎ, ಇ, ಅಳು, ಇತಿ, ಇತ್ತಿ, ಗಿತ್ತಿ ಮುಂತಾದ ಪ್ರತ್ಯಯಗಳನ್ನು ಸೇರಿಸಿ ಸ್ತ್ರೀ ಲಿಂಗ ಪದಗಳನ್ನು ಪಡೆಯಬಹುದು. ಇವುಗಳನ್ನು ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

| ಪುಲ್ಲಿಂಗ | ಸ್ತ್ರೀಲಿಂಗ | ಪುಲ್ಲಿಂಗ | ಸ್ತ್ರೀಲಿಂಗ |
|---|---|---|---|
| ಅಪ್ಪ | ಅಮ್ಮ | ತಂದೆ | ತಾಯಿ |
| ಗಂಡ | ಹೆಂಡತಿ | ಹುಡುಗ | ಹುಡುಗಿ |
| ಮಗ | ಮಗಳು | ರಾಜ | ರಾಣಿ |
| ಜಾಣ | ಜಾಣೆ | ಗುಣವಂತ | ಗುಣವಂತೆ |
| ಗಾಯಕ | ಗಾಯಕಿ | ಯಜಮಾನ | ಯಜಮಾನಿ |
| ಬೀಗ | ಬೀಗಿತ್ತಿ | ಗಾಣಿಗ | ಗಾಣಿಗಿತ್ತಿ |
| ಅಣ್ಣ | ಅಕ್ಕ | ತಮ್ಮ | ತಂಗಿ |
| ಬಾಲಕ | ಬಾಲಕಿ | ಮಾವ | ಅತ್ತೆ |
| ಚಿಕ್ಕಪ್ಪ | ಚಿಕ್ಕಮ್ಮ | ದೊಡ್ಡಪ್ಪ | ದೊಡ್ಡಮ್ಮ |
| ತಜ್ಞ | ತಜ್ಞೆ | ನಾಯಕ | ನಾಯಕಿ |
| ಶಿಕ್ಷಕ | ಶಿಕ್ಷಕಿ | ಚಲುವ | ಚಲುವೆ |
| ಕುಂಬಾರ | ಕುಂಬಾರಗಿತ್ತಿ | ಶ್ರೀಮಾನ್ | ಶ್ರೀಮತಿ |

## ವಚನ (Number)

ವ್ಯಕ್ತಿ ಅಥವಾ ವಸ್ತುಗಳ ಸಂಖ್ಯೆಯನ್ನು ತಿಳಿಯಲು ನಾವು ವಚನದ ಕಲ್ಪನೆಯನ್ನು ಉಪಯೋಗಿಸುತ್ತೇವೆ. ಕನ್ನಡದಲ್ಲಿ ಎರಡು ವಚನಗಳಿವೆ.

1. ಏಕವಚನ(Singular Number): ಒಬ್ಬ ವ್ಯಕ್ತಿ ಅಥವಾ ಒಂದು ವಸ್ತುವನ್ನು ಸೂಚಿಸುವ ಪದಗಳಿಗೆ ಏಕವಚನ ಎನ್ನುತ್ತಾರೆ.

ಗಿಡ, ಮನೆ, ಬಾಲಕ, ಕತ್ತೆ, ಇತ್ಯಾದಿ.

2. ಬಹುವಚನ (Plural Number): ಒಂದಕ್ಕಿಂತ ಹೆಚ್ಚು ವ್ಯಕ್ತಿಗಳನ್ನು ಅಥವಾ ವಸ್ತುಗಳನ್ನು ಸೂಚಿಸುವ ಪದಗಳಿಗೆ ಬಹುವಚನ ಎನ್ನುತ್ತಾರೆ.

ಗಿಡಗಳು, ಮನೆಗಳು, ಬಾಲಕರು, ಕತ್ತೆಗಳು, ಇತ್ಯಾದಿ.

ಏಕವಚನ ಶಬ್ದಗಳಿಗೆ ಗಳು, ಅರು, ಅಂದಿರು ಎಂಬ ಪ್ರತ್ಯಯಗಳನ್ನು ಸೇರಿಸಿದಾಗ ಬಹುವಚನಗಳು ಬರುತ್ತವೆ. ಇವುಗಳನ್ನು ಕೆಳಗಿನ ಪಟ್ಟಿಯಲ್ಲಿ ತೋರಿಸಲಾಗಿದೆ.

| ಏಕವಚನ | ಬಹುವಚನ | ಏಕವಚನ | ಬಹುವಚನ |
|---|---|---|---|
| ಹಸು | ಹಸುಗಳು | ಶಾಲೆ | ಶಾಲೆಗಳು |
| ನಾಯಕ | ನಾಯಕರು | ಪಂಡಿತ | ಪಂಡಿತರು |
| ತಮ್ಮ | ತಮ್ಮಂದಿರು | ಅಕ್ಕ | ಅಕ್ಕಂದಿರು |
| ಮರ | ಮರಗಳು | ಗುರು | ಗುರುಗಳು |
| ಗಾಯಕ | ಗಾಯಕರು | ಅಣ್ಣ | ಅಣ್ಣಂದಿರು |
| ತಂಗಿ | ತಂಗಿಯರು | ವಿದ್ವಾಂಸ | ವಿದ್ವಾಂಸರು |

ಸರ್ವನಾಮ (Pronoun)

ನಾಮಪದಗಳಿಗೆ ಬದಲಾಗಿ ಉಪಯೋಗಿಸುವ ಪದಗಳಿಗೆ ಸರ್ವನಾಮ ಎಂದು ಹೆಸರು. ಆವನು, ಅದು, ಇದು, ಅವಳು, ನೀನು, ಇತ್ಯಾದಿ.

ಬೆಂಗಳೂರು ಸುಂದರ ನಗರ. ಅದು ನಮ್ಮ ರಾಜಧಾನಿ.

ಇಲ್ಲಿ ಅದು ಸರ್ವನಾಮ. ಅದನ್ನು ಬೆಂಗಳೂರಿಗೆ ಬದಲಾಗಿ ಉಪಯೋಗಿಸಿದೆ.

ಪುರುಷಾರ್ಥಕ ಸರ್ವನಾಮಗಳು (Personal Pronouns): ವ್ಯಕ್ತಿ ಅಥವಾ ವಸ್ತುಗಳಿಗೆ ಬದಲಾಗಿ ಉಪಯೋಗಿಸುವ ಸರ್ವನಾಮಗಳು. ಇವುಗಳಲ್ಲಿ ಮೂರು ವಿಧ.

1. ಉತ್ತಮ ಪುರುಷ (I Person), 2. ಮಧ್ಯಮ ಪುರುಷ (II Person), ಮತ್ತು 3. ಅನ್ಯ(ಪ್ರಥಮ) ಪುರುಷ (III Person).

| ಪುರುಷ | ಏಕವಚನ | ಬಹುವಚನ |
|---|---|---|
| ಉತ್ತಮ ಪುರುಷ | ನಾನು | ನಾವು |

| | | |
|---|---|---|
| ಮಧ್ಯಮ ಪುರುಷ | ನೀನು | ನೀವು |
| ಅನ್ಯ ಪುರುಷ (ಪ್ರಥಮ ಪುರುಷ) | ಅವನು/ಇವನು<br>ಅವಳು/ಇವಳು<br>ಅದು/ಇದು | ಅವರು/ಇವರು<br>ಅವು/ಇವು |

ಪುರುಷಾರ್ಥಕ ಸರ್ವನಾಮಗಳಿಗೆ ಪ್ರತ್ಯಯಗಳು ಸೇರಿದಾಗ ಆಗುವ ಬದಲಾವಣೆಗಳನ್ನು ಕೆಳಗಿನ ಪಟ್ಟಿಯಲ್ಲಿ ಕಾಣಬಹುದು.

| ವಿಭಕ್ತಿ | ಏಕ ವಚನ | ಬಹು ವಚನ | ಏಕ ವಚನ | ಬಹು ವಚನ |
|---|---|---|---|---|
| ಪ್ರಥಮ | ನಾನು | ನಾವು | ನೀನು | ನೀವು |
| ದ್ವಿತೀಯ | ನನ್ನನ್ನು | ನಮ್ಮನ್ನು | ನಿನ್ನನ್ನು | ನಿಮ್ಮನ್ನು |
| ತೃತೀಯ | ನನ್ನಿಂದ | ನಮ್ಮಿಂದ | ನಿನ್ನಿಂದ | ನಿಮ್ಮಿಂದ |
| ಚತುರ್ಥಿ | ನನಗೆ | ನಮಗೆ | ನಿನಗೆ | ನಿಮಗೆ |
| ಷಷ್ಠಿ | ನನ್ನ | ನಮ್ಮ | ನಿನ್ನ | ನಿಮ್ಮ |
| ಸಪ್ತಮಿ | ನನ್ನಲ್ಲಿ | ನಮ್ಮಲ್ಲಿ | ನಿನ್ನಲ್ಲಿ | ನಿಮ್ಮಲ್ಲಿ |

*****

| ವಿಭಕ್ತಿ | ಏಕ ವಚನ | ಬಹು ವಚನ | ಏಕ ವಚನ | ಬಹು ವಚನ |
|---|---|---|---|---|
| ಪ್ರಥಮ | ಅವನು | ಅವರು | ಅದು | ಅವು |
| ದ್ವಿತೀಯ | ಅವನನ್ನು | ಅವರನ್ನು | ಅದನ್ನು | ಅವುಗಳನ್ನು |
| ತೃತೀಯ | ಅವನಿಂದ | ಅವರಿಂದ | ಅದರಿಂದ | ಅವುಗಳಿಂದ |
| ಚತುರ್ಥಿ | ಅವನಿಗೆ | ಅವರಿಗೆ | ಅದಕ್ಕೆ | ಅವುಗಳಿಗೆ |
| ಷಷ್ಠಿ | ಅವನ | ಅವರ | ಅದರ | ಅವುಗಳ |
| ಸಪ್ತಮಿ | ಅವನಲ್ಲಿ | ಅವರಲ್ಲಿ | ಅದರಲ್ಲಿ | ಅವುಗಳಲ್ಲಿ |

## ಕ್ರಿಯಾಪದ (Person)

ಕರ್ತೃವು ಮಾಡುವ ಕೆಲಸವನ್ನು ತೋರಿಸುವ ಪದಕ್ಕೆ ಕ್ರಿಯಾಪದ ಎಂದು ಹೆಸರು. ಕ್ರಿಯಾಪದಗಳಲ್ಲಿ ಸಕರ್ಮಕ ಕ್ರಿಯಾಪದ ಮತ್ತು ಅಕರ್ಮಕ ಕ್ರಿಯಾಪದ ಎಂದು ಎರಡು ವಿಧಗಳು.

ಸಕರ್ಮಕ ಕ್ರಿಯಾಪದ (Transitive Verb):
ಕರ್ಮಪದವನ್ನು ತೆಗೆದುಕೊಳ್ಳುವ ಕ್ರಿಯಾಪದಕ್ಕೆ ಸಕರ್ಮಕ ಕ್ರಿಯಾಪದ ಎಂದು ಹೆಸರು. ಕರ್ಮಪದವಿಲ್ಲದಿದ್ದರೆ ಅರ್ಥ ಪೂರ್ಣವಾಗುವುದಿಲ್ಲ.

ನಾನು ಪುಸ್ತಕವನ್ನು ಓದುತ್ತಿದ್ದೇನೆ.
ಅವನು ಆಟವನ್ನು ಆಡುತ್ತಿದ್ದಾನೆ.

ಅಕರ್ಮಕ ಕ್ರಿಯಾಪದ (Intransitive Verb):
ಕರ್ಮಪದವನ್ನು ತೆಗೆದುಕೊಳ್ಳದ ಕ್ರಿಯಾಪದಕ್ಕೆ ಅಕರ್ಮಕ ಕ್ರಿಯಾಪದ ಎಂದು ಹೆಸರು. ಕರ್ಮಪದವಿಲ್ಲದಿದ್ದರೂ ಅರ್ಥ ಪೂರ್ಣವಾಗುತ್ತದೆ.

ನಾಯಿ ಬೊಗಳುತ್ತದೆ.
ಕುದುರೆ ಓಡುತ್ತಿದೆ.

ಕ್ರಿಯಾಪದದ ಮೂಲರೂಪಕ್ಕೆ ಧಾತು (Root Verb) ಎಂದು ಹೆಸರು. ಕಾಲವನ್ನು ಸೂಚಿಸಲು ಧಾತುವಿಗೆ ಸೇರಿಸುವ ಪ್ರತ್ಯಯಗಳಿಗೆ ಕಾಲಸೂಚಕ ಪ್ರತ್ಯಯಗಳೆಂದು ಹೆಸರು. ಲಿಂಗ, ವಚನ, ಪುರುಷಗಳನ್ನು ಗುರುತಿಸಲು ಧಾತುವಿಗೆ ಸೇರಿಸುವ ಪ್ರತ್ಯಯಗಳಿಗೆ ಆಖ್ಯಾತ ಪ್ರತ್ಯಯಗಳೆಂದು ಹೆಸರು. ಧಾತುಗಳಿಗೆ ಕಾಲಸೂಚಕ ಪ್ರತ್ಯಯ ಮತ್ತು ಆಖ್ಯಾತ ಪ್ರತ್ಯಯಗಳು ಸೇರಿದಾಗ ಕ್ರಿಯಾಪದವಾಗುತ್ತದೆ.

**ಧಾತು+ಕಾಲಸೂಚಕಪ್ರತ್ಯಯ+ಆಖ್ಯಾತಪ್ರತ್ಯಯ=ಕ್ರಿಯಾಪದ.**

ಓದು + ಉತ್ತ + ಆನೆ = ಓದುತ್ತಾನೆ
ಓದು + ದ + ಅರು = ಓದಿದರು
ಓದು + ಉವ + ಅಳು = ಓದುವಳು

ಸೂಚನೆ: ಧಾತುಗಳಿಗೆ ಪ್ರತ್ಯಯಗಳು ಸೇರುವಾಗ ಅಲ್ಪಸ್ವಲ್ಪ ಬದಲಾವಣೆಗಳಾಗುತ್ತವೆ. ಈ ಬದಲಾವಣೆ ಗಳನ್ನು ಗಮನಿಸಿದರೆ ಕಲಿಕೆಯು ಅರ್ಥವತ್ತಾಗುತ್ತದೆ.

ಕಾಲಗಳು (Tenses): ಕಾಲ ಎಂದರೆ ಸಮಯ. ಯಾವ ಸಮಯದಲ್ಲಿ ಕೆಲಸ ವಾಯಿತೆಂದು ತಿಳಿಸುವುದೇ ಕಾಲ. ಕ್ರಿಯಾಪದದಲ್ಲಿ ಮೂರು ರೀತಿಯ ಕಾಲ ಗಳಿವೆ. ಈ ಕಾಲಗಳನ್ನು ಹಾಗೂ ಆಯಾ ಕಾಲಸೂಚಕ ಪ್ರತ್ಯಯಗಳನ್ನು ಕೆಳಗೆ ಕಾಣಬಹುದು.

| ಕಾಲ | ಸಮಯ | ಪ್ರತ್ಯಯ |
|---|---|---|
| ವರ್ತಮಾನ ಕಾಲ | ಈಗಿನ ಸಮಯ | ಉತ್ತ |
| ಭೂತ ಕಾಲ | ಹಿಂದಿನ ಸಮಯ | ದ |
| ಭವಿಷ್ಯತ್ ಕಾಲ | ಮುಂದಿನ ಸಮಯ | ಉವ/ವ |

ಇದೇ ರೀತಿ, ಲಿಂಗ, ವಚನ, ಪುರುಷಗಳಿಗನುಸಾರವಾಗಿ ಆಖ್ಯಾತ ಪ್ರತ್ಯಯಗಳನ್ನು ಕೆಳಗೆ ತೋರಿಸಿದೆ.

ಆಖ್ಯಾತ ಪ್ರತ್ಯಯಗಳು

| ಪುರುಷ | ಕಾಲ | ಪುಲ್ಲಿಂಗ | | ಸ್ತ್ರೀಲಿಂಗ | | ನಪುಂಸಕ ಲಿಂಗ | |
|---|---|---|---|---|---|---|---|
| | | ಏಕ ವಚನ | ಬಹು ವಚನ | ಏಕ ವಚನ | ಬಹು ವಚನ | ಏಕ ವಚನ | ಬಹು ವಚನ |
| ಉತ್ತಮ | ವರ್ತ | ಏನೆ | ಏವೆ | ಏನೆ | ಏವೆ | – | – |
| | ಭೂತ | ಎನು | ಎವು | ಎನು | ಎವು | – | – |
| | ಭವಿ | ಎನು | ಎವು | ಎನು | ಎವು | – | – |
| ಮಧ್ಯಮ | ವರ್ತ | ಈಯೆ | ಈರಿ | ಈಯೆ | ಈರಿ | – | – |
| | ಭೂತ | ಎ | ಇರಿ | ಎ | ಇರಿ | – | – |
| | ಭವಿ | ಎ | ಇರಿ | ಎ | ಇರಿ | – | – |
| ಅನ್ಯ | ವರ್ತ | ಆನೆ | ಆರೆ | ಆಳೆ | ಆರೆ | ಅದೆ ಇದೆ | ಅವೆ ಇವೆ |
| | ಭೂತ | ಅನು | ಅರು | ಅಳು | ಅರು | ಇತು | ಅವು |
| | ಭವಿ | ಅನು | ಅರು | ಅಳು | ಅರು | ಉದು | ಉವು |

ಕಾಲ ಭೇದಗಳು (Kinds of Tense)

ವರ್ತಮಾನ ಕಾಲದಲ್ಲಿ 4 ವಿಧಗಳಿವೆ.

1. ಸಾಮಾನ್ಯ ವರ್ತಮಾನ ಕಾಲ (Simple Present Tense): ಕ್ರಿಯೆಯು ಈಗ ನಡೆಯುತ್ತಿದೆ ಎಂದು ತಿಳಿಸುವ ಕ್ರಿಯಾಪದಕ್ಕೆ ಸಾಮಾನ್ಯ ವರ್ತಮಾನ ಕಾಲ ಎಂದು ಹೆಸರು. ರಾಮನು ಆಡುತ್ತಾನೆ

2. ತಾತ್ಕಾಲಿಕ ವರ್ತಮಾನ ಕಾಲ (Continuous Present Tense): ಕ್ರಿಯೆಯು ಈಗ

ಪ್ರಾರಂಭವಾಗಿ ಇನ್ನೂ ನಡೆಯುತ್ತಿದೆ ಎಂದು ತಿಳಿಸುವ ಕ್ರಿಯಾಪದಕ್ಕೆ ತಾತ್ಕಾಲಿಕ ವರ್ತಮಾನ ಕಾಲ ಎಂದು ಹೆಸರು. ರಾಮನು ಆಡುತ್ತಿದ್ದಾನೆ.

3. ಸಂಪೂರ್ಣ ವರ್ತಮಾನ ಕಾಲ (Perfect Present Tense): ಕ್ರಿಯೆಯು ಈಗ ತಾನೆ ಮುಗಿದಿದೆ ಎಂದು ತಿಳಿಸುವ ಕ್ರಿಯಾಪದಕ್ಕೆ ಸಂಪೂರ್ಣ ವರ್ತಮಾನ ಕಾಲ ಎಂದು ಹೆಸರು. ರಾಮನು ಆಡಿದ್ದಾನೆ.

4. ಸಂದಿಗ್ಧ ವರ್ತಮಾನ ಕಾಲ (Indefinite Present Tense): ಕ್ರಿಯೆಯು ಮುಗಿದಿರಬಹುದು ಎಂದು ತಿಳಿಸುವ ಕ್ರಿಯಾಪದಕ್ಕೆ ಸಂದಿಗ್ಧವರ್ತಮಾನ ಕಾಲ ಎಂದು ಹೆಸರು. ರಾಮನು ಆಡುತ್ತಿರಬಹುದು.

ವರ್ತಮಾನ ಕಾಲದಲ್ಲಿ ಬರೆ ಎಂಬ ಪದದ ರೂಪಾಂತರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕಾಣಬಹುದು.

1.

| | ವರ್ತಮಾನ ಕಾಲ | ಪುಲ್ಲಿಂಗ | |
|---|---|---|---|
| | | ಏಕವಚನ | ಬಹು ವಚನ |
| ಉತ್ತಮ | ಸಾಮಾನ್ಯ | ಬರೆಯುತ್ತೇನೆ | ಬರೆಯುತ್ತೇವೆ |
| | ತಾತ್ಕಾಲಿಕ | ಬರೆಯುತ್ತಿದ್ದೇನೆ | ಬರೆಯುತ್ತಿದ್ದೇವೆ |
| | ಸಂಪೂರ್ಣ | ಬರೆದಿದ್ದೇನೆ | ಬರೆದಿದ್ದೇವೆ |
| | ಸಂದಿಗ್ಧ | ಬರೆಯುತ್ತಿರ ಬಹುದು | ಬರೆಯುತ್ತಿರ ಬಹುದು |
| ಮಧ್ಯಮ | ಸಾಮಾನ್ಯ | ಬರೆಯುತ್ತೀಯೆ | ಬರೆಯುತ್ತೀರಿ |
| | ತಾತ್ಕಾಲಿಕ | ಬರೆಯುತ್ತಿದ್ದೀಯೆ | ಬರೆಯುತ್ತಿದ್ದೀರಿ |
| | ಸಂಪೂರ್ಣ | ಬರೆದಿದ್ದೀಯೆ | ಬರೆದಿದ್ದೀರಿ |
| | ಸಂದಿಗ್ಧ | ಬರೆಯುತ್ತಿರ ಬಹುದು | ಬರೆಯುತ್ತಿರ ಬಹುದು |
| ಅನ್ಯ | ಸಾಮಾನ್ಯ | ಬರೆಯುತ್ತಾನೆ | ಬರೆಯುತ್ತಾರೆ |
| | ತಾತ್ಕಾಲಿಕ | ಬರೆಯುತ್ತಿದ್ದಾನೆ | ಬರೆಯುತ್ತಿದ್ದಾರೆ |
| | ಸಂಪೂರ್ಣ | ಬರೆದಿದ್ದಾನೆ | ಬರೆದಿದ್ದಾರೆ |

| | | | |
|---|---|---|---|
| | ಸಂದಿಗ್ಧ | ಬರೆಯುತ್ತಿರ ಬಹುದು | ಬರೆಯುತ್ತಿರ ಬಹುದು |

2.

| | ವರ್ತಮಾನ ಕಾಲ | ಸ್ತ್ರೀಲಿಂಗ | |
|---|---|---|---|
| | | ಏಕ ವಚನ | ಬಹು ವಚನ |
| ಉತ್ತಮ | ಸಾಮಾನ್ಯ | ಬರೆಯುತ್ತೇನೆ | ಬರೆಯುತ್ತೇವೆ |
| | ತಾತ್ಕಾಲಿಕ | ಬರೆಯುತ್ತಿದ್ದೇನೆ | ಬರೆಯುತ್ತಿದ್ದೇವೆ |
| | ಸಂಪೂರ್ಣ | ಬರೆದಿದ್ದೇನೆ | ಬರೆದಿದ್ದೇವೆ |
| | ಸಂದಿಗ್ಧ | ಬರೆಯುತ್ತಿರ ಬಹುದು | ಬರೆಯುತ್ತಿರ ಬಹುದು |
| ಮಧ್ಯಮ | ಸಾಮಾನ್ಯ | ಬರೆಯುತ್ತೀಯೆ | ಬರೆಯುತ್ತೀರಿ |
| | ತಾತ್ಕಾಲಿಕ | ಬರೆಯುತ್ತಿದ್ದೀಯೆ | ಬರೆಯುತ್ತಿದ್ದೀರಿ |
| | ಸಂಪೂರ್ಣ | ಬರೆದಿದ್ದೀಯೆ | ಬರೆದಿದ್ದೀರಿ |
| | ಸಂದಿಗ್ಧ | ಬರೆಯುತ್ತಿರ ಬಹುದು | ಬರೆಯುತ್ತಿರ ಬಹುದು |
| ಅನ್ಯ | ಸಾಮಾನ್ಯ | ಬರೆಯುತ್ತಾಳೆ | ಬರೆಯುತ್ತಾರೆ |
| | ತಾತ್ಕಾಲಿಕ | ಬರೆಯುತ್ತಿದ್ದಾಳೆ | ಬರೆಯುತ್ತಿದ್ದಾರೆ |
| | ಸಂಪೂರ್ಣ | ಬರೆದಿದ್ದಾಳೆ | ಬರೆದಿದ್ದಾರೆ |
| | ಸಂದಿಗ್ಧ | ಬರೆಯುತ್ತಿರ ಬಹುದು | ಬರೆಯುತ್ತಿರ ಬಹುದು |

3.

| | ವರ್ತಮಾನ ಕಾಲ | ನಪುಂಸಕ ಲಿಂಗ | |
|---|---|---|---|
| | | ಏಕ ವಚನ | ಬಹು ವಚನ |
| ಉತ್ತಮ | ಸಾಮಾನ್ಯ | – | – |
| | ತಾತ್ಕಾಲಿಕ | – | – |
| | ಸಂಪೂರ್ಣ | – | – |
| | ಸಂದಿಗ್ಧ | – | – |
| ಮಧ್ಯಮ | ಸಾಮಾನ್ಯ | – | – |
| | ತಾತ್ಕಾಲಿಕ | – | – |
| | ಸಂಪೂರ್ಣ | – | – |

| | | | |
|---|---|---|---|
| | ಸಂದಿಗ್ಧ | – | – |
| ಅನ್ಯ | ಸಾಮಾನ್ಯ | ಬರೆಯುತ್ತದೆ | ಬರೆಯುತ್ತವೆ |
| | ತಾತ್ಕಾಲಿಕ | ಬರೆಯುತ್ತಿದೆ | ಬರೆಯುತ್ತಿವೆ |
| | ಸಂಪೂರ್ಣ | ಬರೆದಿದ್ದಿದೆ | ಬರೆದಿದ್ದಿವೆ |
| | ಸಂದಿಗ್ಧ | ಬರೆಯುತ್ತಿರಬಹುದು | ಬರೆಯುತ್ತಿರಬಹುದು |

ಭೂತ ಕಾಲದಲ್ಲೂ 4 ವಿಧಗಳಿವೆ.

1. ಸಾಮಾನ್ಯ ಭೂತ ಕಾಲ (Simple Past Tense): ಕ್ರಿಯೆಯು ಹಿಂದೆ ನಡೆದಿದೆ ಎಂದು ತಿಳಿಸುವ ಕ್ರಿಯಾಪದಕ್ಕೆ ಸಾಮಾನ್ಯ ಭೂತ ಕಾಲ ಎಂದು ಹೆಸರು.

ರಾಮನು ಆಡಿದನು

2. ತಾತ್ಕಾಲಿಕ ಭೂತ ಕಾಲ (Continuous Past Tense): ಕ್ರಿಯೆಯು ಹಿಂದೆ ಪ್ರಾರಂಭವಾಗಿ ಇನ್ನೂ ನಡೆಯುತ್ತಿದೆ ಎಂದು ತಿಳಿಸುವ ಕ್ರಿಯಾಪದಕ್ಕೆ ತಾತ್ಕಾಲಿಕ ಭೂತ ಕಾಲ ಎಂದು ಹೆಸರು. ರಾಮನು ಆಡುತ್ತಿದ್ದನು.

3. ಸಂಪೂರ್ಣ ಭೂತ ಕಾಲ (Perfect Past Tense): ಕ್ರಿಯೆಯು ಹಿಂದೆಯೇ ನಡೆದು ಮುಗಿದಿದೆ ಎಂದು ತಿಳಿಸುವ ಕ್ರಿಯಾಪದಕ್ಕೆ ಸಂಪೂರ್ಣ ಭೂತ ಕಾಲ ಎಂದು ಹೆಸರು. ರಾಮನು ಆಡಿದ್ದನು.

4. ಸಂದಿಗ್ಧ ಭೂತ ಕಾಲ (Indefinite Past Tense): ಕ್ರಿಯೆಯು ಹಿಂದೆಯೇ ಮುಗಿದಿರಬಹುದು ಎಂದು ತಿಳಿಸುವ ಕ್ರಿಯಾಪದಕ್ಕೆ ಸಂದಿಗ್ಧ ಭೂತ ಕಾಲ ಎಂದು ಹೆಸರು. ರಾಮನು ಆಡಿರಬಹುದು.

ಭೂತ ಕಾಲದಲ್ಲಿ ಬರೆ ಎಂಬ ಪದದ ರೂಪಾಂತರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕಾಣಬಹುದು.

1.

| | | | |
|---|---|---|---|
| | ಭೂತ ಕಾಲ | ಪುಲ್ಲಿಂಗ | |
| | | ಏಕವಚನ | ಬಹು ವಚನ |

| | | | |
|---|---|---|---|
| ಉತ್ತಮ | ಸಾಮಾನ್ಯ | ಬರೆದೆನು | ಬರೆದೆವು |
| | ತಾತ್ಕಾಲಿಕ | ಬರೆಯುತ್ತಿದ್ದೆನು | ಬರೆಯುತ್ತಿದ್ದೆವು |
| | ಸಂಪೂರ್ಣ | ಬರೆದಿದ್ದೆನು | ಬರೆದಿದ್ದೆವು |
| | ಸಂದಿಗ್ಧ | ಬರೆದಿರ ಬಹುದು | ಬರೆದಿರ ಬಹುದು |
| ಮಧ್ಯಮ | ಸಾಮಾನ್ಯ | ಬರೆದೆ | ಬರೆದಿರಿ |
| | ತಾತ್ಕಾಲಿಕ | ಬರೆಯುತ್ತಿದ್ದೆ | ಬರೆಯುತ್ತಿದ್ದಿರಿ |
| | ಸಂಪೂರ್ಣ | ಬರೆದಿದ್ದೆ | ಬರೆದಿದ್ದಿರಿ |
| | ಸಂದಿಗ್ಧ | ಬರೆದಿರ ಬಹುದು | ಬರೆದಿರ ಬಹುದು |
| ಅನ್ಯ | ಸಾಮಾನ್ಯ | ಬರೆದನು | ಬರೆದರು |
| | ತಾತ್ಕಾಲಿಕ | ಬರೆಯುತ್ತಿದ್ದನು | ಬರೆಯುತ್ತಿದ್ದರು |
| | ಸಂಪೂರ್ಣ | ಬರೆದಿದ್ದನು | ಬರೆದಿದ್ದರು |
| | ಸಂದಿಗ್ಧ | ಬರೆದಿರ ಬಹುದು | ಬರೆದಿರ ಬಹುದು |

2.

| | ಭೂತ ಕಾಲ | ಸ್ತ್ರೀಲಿಂಗ | |
|---|---|---|---|
| | | ಏಕ ವಚನ | ಬಹು ವಚನ |
| ಉತ್ತಮ | ಸಾಮಾನ್ಯ | ಬರೆದೆನು | ಬರೆದೆವು |
| | ತಾತ್ಕಾಲಿಕ | ಬರೆಯುತ್ತಿದ್ದೆನು | ಬರೆಯುತ್ತಿದ್ದೆವು |
| | ಸಂಪೂರ್ಣ | ಬರೆದಿದ್ದೆನು | ಬರೆದಿದ್ದೆವು |
| | ಸಂದಿಗ್ಧ | ಬರೆದಿರ ಬಹುದು | ಬರೆದಿರ ಬಹುದು |
| ಮಧ್ಯಮ | ಸಾಮಾನ್ಯ | ಬರೆದೆ | ಬರೆದಿರಿ |
| | ತಾತ್ಕಾಲಿಕ | ಬರೆಯುತ್ತಿದ್ದೆ | ಬರೆಯುತ್ತಿದ್ದಿರಿ |
| | ಸಂಪೂರ್ಣ | ಬರೆದಿದ್ದೆ | ಬರೆದಿದ್ದಿರಿ |
| | ಸಂದಿಗ್ಧ | ಬರೆದಿರ ಬಹುದು | ಬರೆದಿರ ಬಹುದು |
| ಅನ್ಯ | ಸಾಮಾನ್ಯ | ಬರೆದಳು | ಬರೆದರು |
| | ತಾತ್ಕಾಲಿಕ | ಬರೆಯುತ್ತಿದ್ದಳು | ಬರೆಯುತ್ತಿದ್ದರು |

| | | | |
|---|---|---|---|
| | ಸಂಪೂರ್ಣ | ಬರೆದಿದ್ದಳು | ಬರೆದಿದ್ದರು |
| | ಸಂದಿಗ್ಧ | ಬರೆದಿರ ಬಹುದು | ಬರೆದಿರ ಬಹುದು |

3.

| | ಭೂತ ಕಾಲ | ನಪುಂಸಕ ಲಿಂಗ | |
|---|---|---|---|
| | | ಏಕ ವಚನ | ಬಹು ವಚನ |
| ಉತ್ತಮ | ಸಾಮಾನ್ಯ | – | – |
| | ತಾತ್ಕಾಲಿಕ | – | – |
| | ಸಂಪೂರ್ಣ | – | – |
| | ಸಂದಿಗ್ಧ | – | – |
| ಮಧ್ಯಮ | ಸಾಮಾನ್ಯ | – | – |
| | ತಾತ್ಕಾಲಿಕ | – | – |
| | ಸಂಪೂರ್ಣ | – | – |
| | ಸಂದಿಗ್ಧ | – | – |
| ಅನ್ಯ | ಸಾಮಾನ್ಯ | ಬರೆದಿತು | ಬರೆದವು |
| | ತಾತ್ಕಾಲಿಕ | ಬರೆಯುತ್ತಿದ್ದಿತು | ಬರೆಯುತ್ತಿದ್ದವು |
| | ಸಂಪೂರ್ಣ | ಬರೆದಿದ್ದಿತು | ಬರೆಯುದಿದ್ದವು |
| | ಸಂದಿಗ್ಧ | ಬರೆದಿರ ಬಹುದು | ಬರೆದಿರ ಬಹುದು |

ಭವಿಷ್ಯತ್ ಕಾಲದಲ್ಲಿ 2 ವಿಧಗಳಿವೆ.

1. ಸಾಮಾನ್ಯ ಭವಿಷ್ಯತ್ ಕಾಲ (Simple Future Tense): ಕ್ರಿಯೆಯು ಮುಂದೆ ನಡೆಯುವುದು ಎಂದು ತಿಳಿಸುವ ಕ್ರಿಯಾಪದಕ್ಕೆ ಸಾಮಾನ್ಯ ಭವಿಷ್ಯತ್ ಕಾಲ ಎಂದು ಹೆಸರು. ರಾಮನು ಆಡುವನು

2. ಸಂಭಾವ್ಯ ಭವಿಷ್ಯತ್ ಕಾಲ (Indefinite Future Tense): ಕ್ರಿಯೆಯು ಮುಂದೆ ನಡೆಯಬಹುದು ಎಂದು ತಿಳಿಸುವ ಕ್ರಿಯಾಪದಕ್ಕೆ ಸಂಭಾವ್ಯ ಭವಿಷ್ಯತ್ ಕಾಲ ಎಂದು ಹೆಸರು. ರಾಮನು ಆಡಬಹುದು.

ಭವಿಷ್ಯತ್ ಕಾಲದಲ್ಲಿ ಬರೆ ಎಂಬ ಪದದ ರೂಪಾಂತರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕಾಣಬಹುದು.

1.

| | ಭವಿಷ್ಯತ್ ಕಾಲ | ಪುಲ್ಲಿಂಗ | |
|---|---|---|---|
| | | ಏಕ ವಚನ | ಬಹು ವಚನ |
| ಉ | ಸಾಮಾನ್ಯ | ಬರೆಯುವೆನು | ಬರೆಯುವೆವು |
| | ಸಂಭಾವ್ಯ | ಬರೆಯಬಹುದು | ಬರೆಯಬಹುದು |
| ಮ | ಸಾಮಾನ್ಯ | ಬರೆಯುವೆ | ಬರೆಯುವಿರಿ |
| | ಸಂಭಾವ್ಯ | ಬರೆಯಬಹುದು | ಬರೆಯಬಹುದು |
| ಅ | ಸಾಮಾನ್ಯ | ಬರೆಯುವನು | ಬರೆಯುವರು |
| | ಸಂಭಾವ್ಯ | ಬರೆಯಬಹುದು | ಬರೆಯಬಹುದು |

2.

| | ಭವಿಷ್ಯತ್ ಕಾಲ | ಸ್ತ್ರೀಲಿಂಗ | |
|---|---|---|---|
| | | ಏಕ ವಚನ | ಬಹು ವಚನ |
| ಉ | ಸಾಮಾನ್ಯ | ಬರೆಯುವೆನು | ಬರೆಯುವೆವು |
| | ಸಂಭಾವ್ಯ | ಬರೆಯಬಹುದು | ಬರೆಯಬಹುದು |
| ಮ | ಸಾಮಾನ್ಯ | ಬರೆಯುವೆ | ಬರೆಯುವಿರಿ |
| | ಸಂಭಾವ್ಯ | ಬರೆಯಬಹುದು | ಬರೆಯಬಹುದು |
| ಅ | ಸಾಮಾನ್ಯ | ಬರೆಯುವಳು | ಬರೆಯುವರು |
| | ಸಂಭಾವ್ಯ | ಬರೆಯಬಹುದು | ಬರೆಯಬಹುದು |

3.

| | ಭವಿಷ್ಯತ್ ಕಾಲ | ನಪುಂಸಕ ಲಿಂಗ | |
|---|---|---|---|
| | | ಏಕ ವಚನ | ಬಹು ವಚನ |
| ಉ | ಸಾಮಾನ್ಯ | – | – |
| | ಸಂಭಾವ್ಯ | – | – |
| ಮ | ಸಾಮಾನ್ಯ | – | – |
| | ಸಂಭಾವ್ಯ | – | – |
| ಅ | ಸಾಮಾನ್ಯ | ಬರೆಯುವುದು | ಬರೆಯುವುದು |
| | ಸಂಭಾವ್ಯ | ಬರೆಯಬಹುದು | ಬರೆಯಬಹುದು |

## ನಾಮವಿಶೇಷಣ (Adjective)

ನಾಮಪದದ ವಿಸ್ತಾರ ಅಥವಾ ವಿಶೇಷತೆಯನ್ನು ತಿಳಿಸುವ ಪದಗಳಿಗೆ ನಾಮವಿಶೇಷಣ- ಗಳೆಂದು ಹೆಸರು. ನಾಮವಿಶೇಷಣಗಳಲ್ಲಿ ನಾಲ್ಕು ವಿಧಗಳಿವೆ. ಕ್ರಿಯಾಪದದ ಮೇಲೆ ಎಂತಹ ಎಂಬ ಪ್ರಶ್ನೆಯನ್ನು ಹಾಕಿ ನಾಮವಿಶೇಷಣಗಳನ್ನು ಗುರುತಿಸಬಹುದು.

1. ಗುಣವಾಚಕ: ವ್ಯಕ್ತಿ ಅಥವಾ ವಸ್ತುಗಳ ಬಣ್ಣ, ರೂಪ, ಆಕಾರ, ಗುಣ ಮುಂತಾದವುಗಳನ್ನು ತಿಳಿಸುವ ಪದಗಳು ಗುಣವಾಚಕಗಳು.

ಕೆಂಪು ಗುಲಾಬಿ, ಡೊಳ್ಳು ಹೊಟ್ಟೆ, ಗೋಲ ಗುಮ್ಮಟ, ದಯಾಳು ಮಾನವ, ಇತ್ಯಾದಿ.

2. ಸಂಖ್ಯಾವಾಚಕ: ವ್ಯಕ್ತಿ ಅಥವಾ ವಸ್ತುಗಳ ಸಂಖ್ಯೆಗಳನ್ನು ತಿಳಿಸುವ ಪದಗಳು ಸಂಖ್ಯಾವಾಚಕಗಳು.

ಮೂರು ಮಂದಿ, ಆರು ಹುಡುಗರು, ಐದು ಬೆರಳು, ಒಂಬತ್ತು ಗ್ರಹಗಳು, ಇತ್ಯಾದಿ.

3. ಪರಮಾಣವಾಚಕ: ವ್ಯಕ್ತಿ ಅಥವಾ ವಸ್ತುಗಳ ಗಾತ್ರ, ಅಳತೆ, ತೂಕ ಮುಂತಾದವುಗಳನ್ನು ತಿಳಿಸುವ ಪದಗಳು ಪರಿಮಾಣವಾಚಕಗಳು.

ದಪ್ಪನೆ ಮನುಷ್ಯ, ಉದ್ದನೆಯ ಹಾದಿ, ಭಾರವಾದ ಹಗ್ಗ, ಇತ್ಯಾದಿ.

4. ಪ್ರಕಾರವಾಚಕ: ವ್ಯಕ್ತಿ ಅಥವಾ ವಸ್ತುಗಳ ಸ್ಥಿತಿ, ರೀತಿ ಮುಂತಾದವುಗಳನ್ನು ತಿಳಿಸುವ ಪದಗಳು ಪ್ರಕಾರವಾಚಕಗಳು. ಇದು ಎಂತಹ ಮಾತು, ಅವನಂತಹ ಜಾಣ, ಇವನಿಗಿಂತ ಕುಳ್ಳ, ಇತ್ಯಾದಿ.

## ಕ್ರಿಯಾವಿಶೇಷಣ (Adverb)

ಕ್ರಿಯಾಪದದ ವಿಸ್ತಾರ ಅಥವಾ ವಿಶೇಷತೆಯನ್ನು ತಿಳಿಸುವ ಪದಗಳಿಗೆ ಕ್ರಿಯಾವಿಶೇಷಣ-ಗಳೆಂದು ಹೆಸರು. ಜೋರಾಗಿ, ಚನ್ನಾಗಿ, ಮೆಲ್ಲನೆ, ಸುಮ್ಮನೆ, ಮುಂತಾದವು. ಕ್ರಿಯಾಪದದ ಮೇಲೆ ಹೇಗೆ ಎಂಬ ಪ್ರಶ್ನೆಯನ್ನು ಹಾಕಿ ಕ್ರಿಯಾವಿಶೇಷಣಗಳನ್ನು ಗುರುತಿಸಬಹುದು.

ಗಾಳಿಯು ಜೋರಾಗಿ ಬೀಸುತ್ತಿದೆ.

ರಾಜಿಯು ಚನ್ನಾಗಿ ಓದುತ್ತಿದ್ದಾಳೆ.

ಈ ವಾಕ್ಯಗಳಲ್ಲಿ ಜೋರಾಗಿ, ಚನ್ನಾಗಿ ಎಂಬ ಪದಗಳು ಕ್ರಿಯಾಪದದ ವಿಸ್ತಾರ ಅಥವಾ ವಿಶೇಷತೆಯನ್ನು ತಿಳಿಸುತ್ತವೆ. ಇವು ಕ್ರಿಯಾವಿಶೇಷಣಗಳು

ಸಂಬಂಧ ಸೂಚಕ (Preposition)

ಒಂದು ವ್ಯಕ್ತಿ/ವಸ್ತುವಿಗೂ ಮತ್ತೊಂದು ವ್ಯಕ್ತಿ/ವಸ್ತುವಿಗೂ ಇರುವ ಸಂಬಂಧವನ್ನು ಸೂಚಿಸುವ ಪದಗಳಿಗೆ ಸಂಬಂಧ ಸೂಚಕಗಳೆಂದು ಹೆಸರು. ಮೇಲೆ, ಕೆಳಗೆ, ಹಿಂದೆ, ಮುಂದೆ, ಒಳಗೆ, ಹೊರಗೆ, ಮುಂತಾದವು.

ಮೇಜಿನ ಮೇಲೆ ಪುಸ್ತಕವಿದೆ.

ಬಿಂದಿಗೆಯ ಒಳಗೆ ನೀರಿದೆ.

ಇಲ್ಲಿ ಮೇಲೆ, ಒಳಗೆ ಎಂಬ ಪದಗಳು ಮೇಜು ಮತ್ತು ಪುಸ್ತಕಕ್ಕೂ, ಬಿಂದಿಗೆ ಮತ್ತು ನೀರಿಗೂ ಇರುವ ಸಂಬಂಧಗಳನ್ನು ಕ್ರಮವಾಗಿ ಸೂಚಿಸುತ್ತವೆ. ಆದುದರಿಂದ ಇವು ಸಂಬಂಧ ಸೂಚಕಗಳು.

ಸಮುಚ್ಚಯ ಸೂಚಕ (Conjunction)

ಎರಡು ಪದಗಳನ್ನು ಅಥವಾ ಎರಡು ವಾಕ್ಯಗಳನ್ನು ಸೇರಿಸುವ ಪದಗಳಿಗೆ ಸಮುಚ್ಚಯ ಸೂಚಕಗಳೆಂದು ಹೆಸರು. ಮತ್ತು, ಅಥವಾ, ಆದರೆ, ಹಾಗೂ, ಮುಂತಾದವು.

ರಾಜ ಮತ್ತು ರಾಣಿ ಚದುರಂಗದಾಟ ಆಡುತ್ತಿದ್ದಾರೆ.

ಊಟ ಸಿಕ್ಕಿತು ಆದರೆ ಏನೇನೂ ರುಚಿ ಇರಲಿಲ್ಲ.

ಮೊದಲ ವಾಕ್ಯದಲ್ಲಿ ಮತ್ತು ಎಂಬುದು ಎರಡು ಪದಗಳನ್ನೂ, ಆದರೆ ಎಂಬುದು ಎರಡು ವಾಕ್ಯಗಳನ್ನೂ ಸೇರಿಸುತ್ತವೆ. ಇವು ಸಮುಚ್ಚಯ ಸೂಚಕಗಳು.

ಅವಧಾರಣ ಸೂಚಕ (Interjection)

ನಿರ್ಧಾರ ಅಥವಾ ನಿರ್ಣಯವನ್ನು ಸೂಚಿಸುವ ಪದಗಳಿಗೆ ಅವಧಾರಣ ಸೂಚಕಗಳೆಂದು ಹೆಸರು. ಅವನೇ, ಅದೇ, ನೀನೇ, ದೇವರೇ, ಮುಂತಾದವು.

ಅಗೋ, ಅವನೇ ಬಂದನು.

ದೇವರೇ ನಮ್ಮನ್ನು ಕಾಪಾಡಬೇಕು.

ಇಲ್ಲಿ ಅವನೇ ಮತ್ತು ನಮ್ಮನ್ನು ಎಂಬ ಪದಗಳು ನಿರ್ಧಾರ ಅಥವಾ ನಿರ್ಣಯವನ್ನು

ಸೂಚಿಸುತ್ತವೆ. ಆದುದರಿಂದ ಇವು ಅವಧಾರಣ ಸೂಚಕಗಳು.

ವಾಕ್ಯ ರಚನೆ (Verb Pattern)

ಕನ್ನಡದಲ್ಲಿ ವಾಕ್ಯರಚನೆಯು ತುಂಬಾ ಸುಲಭ. ವಾಕ್ಯ ರಚನೆಯ ಸಾಮಾನ್ಯ ಸೂತ್ರವೆಂದರೆ, ವಾಕ್ಯದಲ್ಲಿ ಕರ್ತೃಪದ, ಕರ್ಮಪದ ಮತ್ತು ಕ್ರಿಯಾಪದಗಳು ಅನುಕ್ರಮವಾಗಿ ಬರುತ್ತವೆ. ಕೆಲವೊಮ್ಮೆ ಈ ಕ್ರಮ ಬದಲಾಗಬಹುದು. ಆದರೆ ಅರ್ಥವ್ಯತ್ಯಾಸವಾಗಬಾರದು.

ಕ್ರಿಯಾಪದವು ಅಕರ್ಮಕವಾಗಿದ್ದರೆ ವಾಕ್ಯದಲ್ಲಿ ಕರ್ಮಪದ ಇರುವುದಿಲ್ಲ.

ಕ್ರಿಯಾಪದವು ಕರ್ತೃಪದದ ಲಿಂಗ, ವಚನಗಳಿಗೆ ಅನುಸಾರವಾಗಿರಬೇಕು

ಅವನು ಬಂದನು (ಏಕವಚನ ಪುಲ್ಲಿಂಗ)
ಅವಳು ಬಂದಳು (ಏಕವಚನ ಸ್ತ್ರೀಲಿಂಗ)
ಇವರು ಬಂದರು. (ಬಹುವಚನ ಪುಲ್ಲಿಂಗ ಅಥವಾ ಸ್ತ್ರೀಲಿಂಗ)
ಅವು ಬಂದವು. (ಬಹುವಚನ ನಪುಂಸಕಲಿಂಗ)
ವಾಣಿ ಮತ್ತು ವೀಣಾ ಬಂದರು. (ಬಹುವಚನ ಕರ್ತೃಪದ)
ಗಗನ್ ಅಥವಾ ಗಣೇಶ್ ಬರುವನು (ಏಕವಚನ ಕರ್ತೃಪದ)

ವಾಕ್ಯ ರಚನೆಯ ಮಾದರಿಗಳು

ಮಾದರಿ–1 ಕರ್ತೃಪದ + ಕ್ರಿಯಾಪದ

| ಸಂಖ್ಯೆ | ಕರ್ತೃಪದ | ಕ್ರಿಯಾಪದ |
|---|---|---|
| 1. | ಮಗು | ಅಳುತ್ತಿದೆ |
| 2. | ನಾಯಿ | ಬೊಗಳುತ್ತಿದೆ |
| 3. | ಕಾಗೆ | ಹಾರುತ್ತಿದೆ |
| 4. | ಕೋಗಿಲೆ | ಹಾಡುತ್ತಿದೆ |
| 5. | ನವಿಲು | ಕುಣಿಯುತ್ತಿದೆ |

## ಮಾದರಿ–2 ಕರ್ತೃಪದ + ಪೂರಕ + ಕ್ರಿಯಾಪದ

| ಸಂಖ್ಯೆ | ಕರ್ತೃಪದ | ಪೂರಕ | ಕ್ರಿಯಾಪದ |
|---|---|---|---|
| 1. | ಮಗು | ತೊಟ್ಟಿಲಲ್ಲಿ | ಅಳುತ್ತಿದೆ |
| 2. | ನಾಯಿ | ಬೀದಿಯಲ್ಲಿ | ಬೊಗಳುತ್ತಿದೆ |
| 3. | ಕಾಗೆ | ಆಗಸದಲ್ಲಿ | ಹಾರುತ್ತದೆ |
| 4. | ಕೋಗಿಲೆ | ಮರದಲ್ಲಿ | ಹಾಡುತ್ತಿದೆ |
| 5. | ನವಿಲು | ಬಯಲಲ್ಲಿ | ಕುಣಿಯುತ್ತಿದೆ |

## ಮಾದರಿ–3 ಕರ್ತೃಪದ + ಕ್ರಿಯಾವಿಶೇಷಣ + ಕ್ರಿಯಾಪದ

| ಸಂಖ್ಯೆ | ಕರ್ತೃಪದ | ಕ್ರಿಯಾವಿಶೇಷಣ | ಕ್ರಿಯಾಪದ |
|---|---|---|---|
| 1. | ಮಗು | ಜೋರಾಗಿ | ಅಳುತ್ತಿದೆ |
| 2. | ನಾಯಿ | ಕರ್ಕಶವಾಗಿ | ಬೊಗಳುತ್ತಿದೆ |
| 3. | ಕಾಗೆ | ಹಾಯಾಗಿ | ಹಾರುತ್ತದೆ |
| 4. | ಕೋಗಿಲೆ | ಇಂಪಾಗಿ | ಹಾಡುತ್ತಿದೆ |
| 5. | ನವಿಲು | ಚನ್ನಾಗಿ | ಕುಣಿಯುತ್ತಿದೆ |

## ಮಾದರಿ–4 ಕರ್ತೃಪದ + ಪೂರಕ + ಕ್ರಿಯಾವಿಶೇಷಣ + ಕ್ರಿಯಾಪದ

| ಸಂಖ್ಯೆ | ಕರ್ತೃಪದ | ಪೂರಕ | ಕ್ರಿಯಾವಿಶೇಷಣ | ಕ್ರಿಯಾಪದ |
|---|---|---|---|---|
| 1. | ಮಗು | ತೊಟ್ಟಿಲಲ್ಲಿ | ಜೋರಾಗಿ | ಅಳುತ್ತಿದೆ |
| 2. | ನಾಯಿ | ಬೀದಿಯಲ್ಲಿ | ಕರ್ಕಶವಾಗಿ | ಬೊಗಳುತ್ತಿದೆ |
| 3. | ಕಾಗೆ | ಆಗಸದಲ್ಲಿ | ಹಾಯಾಗಿ | ಹಾರುತ್ತದೆ |
| 4. | ಕೋಗಿಲೆ | ಮರದಲ್ಲಿ | ಇಂಪಾಗಿ | ಹಾಡುತ್ತಿದೆ |
| 5. | ನವಿಲು | ಬಯಲಲ್ಲಿ | ಚನ್ನಾಗಿ | ಕುಣಿಯುತ್ತಿದೆ |

## ಮಾದರಿ–5 ಕರ್ತೃಪದ + ಕರ್ಮಪದ + ಕ್ರಿಯಾಪದ

| ಸಂಖ್ಯೆ | ಕರ್ತೃಪದ | ಕರ್ಮಪದ | ಕ್ರಿಯಾಪದ |
|---|---|---|---|
| 1. | ಅಪ್ಪನು | ಹಣ್ಣನ್ನು | ಕೊಟ್ಟನು |
| 2. | ಅಮ್ಮನು | ರೊಟ್ಟಿಯನ್ನು | ಕೊಟ್ಟಳು |
| 3. | ಮಾವನು | ಪುಸ್ತಕವನ್ನು | ಕೊಟ್ಟನು |
| 4. | ಗೋಪಿಯು | ಚೆಂಡನ್ನು | ಕೊಟ್ಟನು |
| 5. | ಸೀತೆಯು | ಹಾಲನ್ನು | ಕೊಟ್ಟಳು |

## ಮಾದರಿ–6 ಕರ್ತೃಪದ + ಪ. ಕರ್ಮಪದ + ಪ್ರ. ಕರ್ಮಪದ + ಕ್ರಿಯಾಪದ

| ಸಂಖ್ಯೆ | ಕರ್ತೃಪದ | ಪ. ಕರ್ಮಪದ | ಪ್ರ. ಕರ್ಮಪದ | ಕ್ರಿಯಾಪದ |
|---|---|---|---|---|
| 1. | ಅಪ್ಪನು | ನನಗೆ | ಹಣ್ಣನ್ನು | ಕೊಟ್ಟನು |
| 2. | ಅಮ್ಮನು | ತಿರುಕನಿಗೆ | ರೊಟ್ಟಿಯನ್ನು | ಕೊಟ್ಟಳು |
| 3. | ಮಾವನು | ಅಕ್ಕನಿಗೆ | ಪುಸ್ತಕವನ್ನು | ಕೊಟ್ಟನು |
| 4. | ಗೋಪಿಯು | ಪಿಂಟೂಗೆ | ಚೆಂಡನ್ನು | ಕೊಟ್ಟನು |
| 5. | ಸೀತೆಯು | ಮಗುವಿಗೆ | ಹಾಲನ್ನು | ಕೊಟ್ಟಳು |

(ಪ = ಪರೋಕ್ಷ, ಪ್ರ = ಪ್ರತ್ಯಕ್ಷ)